ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೦೧ – ೦೧ –2023ರ ನಡವಳಿಗಳು

ವಿಷಯದ ಸಂಖ್ಯೆ:371/2022-23

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2022–23ನೇ ಸಾಲಿನ ಉಪ ಮಹಾಪೌರರ ಅನುದಾನದ ಲೆಕ್ಕಶೀರ್ಷಿಕೆ ಪಿ–2178 'ಉಪ ಮಹಾಪೌರರ ವಿವೇಚನೆಗೆ ಒಳಪಟ್ಟ ಅನುದಾನದ ಅಡಿ ಮಂಜೂರಾಗಿರುವ CONSTRUCTION OF DRAINS AND CULVERTS IN THANISANDRA VILLAGE AND SARAIPALYA AND SURROUNDING AREAS IN WARD NO. 06, NEW WARD NO. 07 ಎಂಬ ಕಾಮಗಾರಿಗೆ ಅಂದಾಜು ಮೊತ್ತ ರೂ. 300.00 ಲಕ್ಷಗಳಾಗಿರುತ್ತದೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ರೂ.300.00 ಲಕ್ಷಗಳಿಗೆ ಲೋಕೋಪಯೋಗಿ ಇಲಾಖೆಯ PWD SR 2021–22 ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ ರವರು ದಿನಾಂಕ:28–10–2022 ರಂದು ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್‌ಅನ್ನು ದಿ:14–11–2022 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್‌ದಾರರಾದ Abbu Sambasiva Reddy ಮತ್ತು K Lakshmi Narayana Reddy ರವರು ಭಾಗವಹಿಸಿರುತ್ತಾರೆ. ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರು ಬಿಡ್ದುದಾರರಾದ Abbu Sambasiva Reddy ಮತ್ತು K Lakshmi Narayana Reddy ರವರುಗಳ ಆರ್ಥಿಕ ಬಿಡ್ ಅನ್ನು ದಿನಾಂಕ: 30–11–2022 ರಂದು ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರ ಅನುಮೋದನೆಯಂತೆ ತೆರೆಯಲಾಗಿದ್ದು ಕಡಿಮೆ ಮೊತ್ತವನ್ನು ನಮೂದಿಸಿ K Lakshmi Narayana Reddy ರವರು ಎಲ್–1 ಬಿಡ್‌ದಾರರಾಗಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟಿ ಮೊತ್ತ (ಲಕ್ಷಗಳಲ್ಲಿ)	Before Negotiation		
		ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್ ಗಿಟ್ಟಿ ಮೊತ್ತ ದರಗಳಿಗೆ ಹೋಲಿಸಿದಾಗ (2021–22ನೇ ಸಾಲಿನ ದರಪಟ್ಟಿ ಮತ್ತು 07.07.2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ)	ದಿನಾಂಕ: 09–11–2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ
K. Lakhsmi Narayana Reddy	24893890.51	26063931.57	(+)4.70% above	(+)7.60% above

ಮುಂದುವರೆದು, ಎಲ್–1 ಬಿಡ್‌ದಾರರಾದ K. Lakhsmi Narayana Reddy ರವರು ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇ.+4.70% ರಷ್ಟು ಹೆಚ್ಚಿನ ಮೊತ್ತ ರೂ.2,60,63,931.57 ಗಳನ್ನು ನಮೂದಿಸಿದ ಕಾರಣ ಹಾಗೂ ಸದರಿ ಮೊತ್ತವನ್ನು ದಿನಾಂಕ:09–11–2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇ. +7.60% ರಷ್ಟು ಹೆಚ್ಚಾಗಿದ್ದ ಕಾರಣ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಎಲ್–1 ಬಿಡ್‌ದಾರರೊಂದಿಗೆ ದರಸಂಧಾನ ನಡೆಸುವಂತೆ ಸೂಚಿಸಿರುತ್ತಾರೆ. ಅದರಂತೆ ಗುತ್ತಿಗೆದಾರರೊಂದಿಗೆ ದರಸಂಧಾನವನ್ನು ನಡೆಸಿದ್ದು, ದರ ಸಂಧಾನದ ನಂತರ ಎಲ್–1 ಬಿಡ್‌ದಾರರಾದ K. Lakhsmi Narayana Reddy

ರವರು ದಿನಾಂಕ:05–12–2022 ರಂದು ದರಸಂಧಾನ ಪತ್ರವನ್ನು ಬ್ಯಾಟರಾಯನಪುರ ವಿಭಾಗ ಕಛೇರಿಗೆ ಸಲ್ಲಿಸಿ ರೂ.2,54,31,551.23 ಗಳಿಗೆ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ.

ಎಲ್–1 ಬಿಡ್‌ದಾರರು ದರಸಂಧಾನದ ನಂತರ ಸಲ್ಲಿಸಿರುವ ಮೊತ್ತವನ್ನು 2021–22ನೇ ಸಾಲಿನ ದರಪಟ್ಟಿ ಮತ್ತು 07.07.2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇ.(+)2.16% ರಷ್ಟು ಹೆಚ್ಚು ಮೊತ್ತವಾಗಿರುತ್ತದೆ ಹಾಗೂ ದಿನಾಂಕ:09–11–2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇ.(+)4.99% ರಷ್ಟು ಹೆಚ್ಚಿನ ಮೊತ್ತವಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ)	After Negotiation		
		ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ (2021–22ನೇ ಸಾಲಿನ ದರಪಟ್ಟಿ ಮತ್ತು 07.07.2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ)	ದಿನಾಂಕ: 09–11–2022 ರ ಇಶ್ಯೂ ದರಗಳಿಗೆ ಹೋಲಿಸಿದಾಗ
K. Lakhsmi Narayana Reddy	24893890.51	25431551.23	(+)2.16% above	(+)4.99% above

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ಅನುದಾನಗಳಲ್ಲಿ ಕೈಗೊಂಡಿಲ್ಲದೇ ಇರುವ ಮತ್ತು ಪುನಾರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯಯ/2019–20/ಪಿಆರ್/11/2018–19ದಿನಾಂಕ:12–06–2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆ/ಪಿ.ಆರ್/5287/2019–20, ದಿನಾಂಕ: 05–11–2019 ಮತ್ತು ಬಿಬಿಎಂಪಿ/ಆ/ಪಿ.ಆರ್/6166/2019–20, ದಿ:13–12–2019 ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿಗೂ ಮುನ್ನ ಹಾಗೂ ನಂತರದ ಜಿ.ಪಿ.ಎಸ್.ಯುಳ್ಳ ಛಾಯಚಿತ್ರಗಳನ್ನು ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.300.00 ಲಕ್ಷಗಳಿಗೆ ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಅಹ್ವಾನಿಸಲಾಗಿರುವುದರಿಂದ, ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ. ಹಾಗೂ ಸದರಿ ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರಾದ ಶ್ರೀ.K.Lakshmi Narayana Reddy ರವರು ನಮೂದಿಸಿರುವ ದರ ಸಂದಾನದ ಮೊತ್ತವಾದ ರೂ.2,54,31,551.23ಗಳನ್ನು 2021–22ನೇ ಸಾಲಿನ ದರಪಟ್ಟಿ ಮತ್ತು ದಿನಾಂಕ:07–07–2022ರ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇಕಡ:(+)2.16% ರಷ್ಟು ಹೆಚ್ಚು ಮೊತ್ತವಾಗಿರುತ್ತದೆ. ಹಾಗೂ ದಿನಾಂಕ: 09–11–2022ರ ಇಶ್ಯೂ ದರಗಳಿಗೆ ಹೋಲಿಸಿದಾಗ ಶೇಕಡ:4.99%(+)ರಷ್ಟು ಅಧಿಕ ಟೆಂಡರ್ ಪ್ರೀಮಿಯಂಗೆ ಅನುಮೋದನೆ ನೀಡಲು ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:31–12–2022ರ ಟಿಪ್ಪಣಿ.

ತೀರ್ಮಾನ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:31–12–2022ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು